



## ಭಾವೈಕ್ಯತೆ ಸಾರುವ ಗುಡ್ಡದ ಸಿದ್ದೇಶ್ವರ ರಥ

ಬಾಗಲಕೋಟೆ ಜಿಲ್ಲೆಯ ಸೀತಿಮನೆ ಗ್ರಾಮದ ಹತ್ತಿರ ಗುಡ್ಡದಲ್ಲಿರುವ ಗುಡ್ಡದ ಸಿದ್ದೇಶ್ವರ ದೇವಸ್ಥಾನದ ರಥ ವಿಭಿನ್ನವಾಗಿದೆ. ಕಟ್ಟಿಗೆಯಿಂದ ನಿರ್ಮಿಸಿದ ಸುಮಾರು ಇಪ್ಪತ್ತು ಅಡಿ ಎತ್ತರದ ಈ ರಥದ ಮಧ್ಯಭಾಗದಲ್ಲಿ ಹಿಂದೂ ದೇವತೆಗಳು ಮಾತ್ರವಲ್ಲದೆ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ ಧರ್ಮಗಳ ದೇವರು, ಗುರುಗಳನ್ನು ಕೆತ್ತುವ ಮೂಲಕ ಭಾವೈಕ್ಯತೆ ಮೆರೆಯಲಾಗಿದೆ.

ಬಾಗಲಕೋಟೆ ಜಿಲ್ಲೆಯ ಸೀತಿಮನೆ ರೈಲು ನಿಲ್ದಾಣದಿಂದ ಸುಮಾರು ಎರಡು ಕಿ.ಮೀ. ನಡೆದುಕೊಂಡು ಹೋದರೆ ಜನವಸತಿಯಿಂದ ದೂರವಾಗಿ ಗುಡ್ಡದ ಮರೆಯಲ್ಲಿ ಗುಡ್ಡದ ಸಿದ್ದೇಶ್ವರ ದೇವಸ್ಥಾನ ಕಾಣಿಸುತ್ತದೆ. ಇಲ್ಲಿ ಗುಡ್ಡದ ಬಂಡೆಗಲ್ಲಿನಿಂದ ಸಿದ್ದೇಶ್ವರ ದೇವಸ್ಥಾನ ನೈಸರ್ಗಿಕವಾಗಿ ನಿರ್ಮಾಣಗೊಂಡಿದ್ದು, ಗುಹೆಯೊಳಗೆ ಶಿವಲಿಂಗವಿದೆ. ಈ ದೇವಸ್ಥಾನವಲ್ಲದೇ ಇತರ ನಾಲ್ಕೈದು ಸಣ್ಣಪುಟ್ಟ ದೇವಸ್ಥಾನಗಳು ಇಲ್ಲಿವೆ. ಪ್ರತಿವರ್ಷ ಹೊಸ್ತಲಹುಣ್ಣಿಮೆ ಸಂದರ್ಭದಲ್ಲಿ ಭಾವೈಕ್ಯತೆ ಸಾರುವ ಈ ಗುಡ್ಡದ ಸಿದ್ದೇಶ್ವರನ ರಥವನ್ನು ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಭಕ್ತರು ಸಂಭ್ರಮದಿಂದ ಎಳೆಯುತ್ತಾರೆ.

**ಚಿತ್ರ-ಬರಹ: ಸುರೇಶ ವಗ್ಗಾ, ಬಾಗಲಕೋಟ**



## ಶಬರಿಮಲೆಯ ಡೋಲಿ

ಶಬರಿಮಲೆ ಯಾತ್ರೆಗೈದವರಿಗೆ ಡೋಲಿಯ ಪರಿಚಯ ಇದ್ದೇ ಇರುತ್ತದೆ. ಪಂಪಾ ನದಿಯಿಂದ ಶಬರಿಮಲೆಯವರೆಗೆ ಬೆಟ್ಟ ಹತ್ತಲು ಕಷ್ಟಪಡುವವರನ್ನು ಕುಳ್ಳಿರಿಸಿ ನಾಲ್ಕು ಮಂದಿ ಭುಜದ ಮೇಲೆ ಹೊತ್ತುಕೊಂಡು ಹೋಗುವ ಸಾಧನವಿದು. ಬೆತ್ತದಿಂದ ತಯಾರಿಸಿದ ಈ ಸಾಧನಕ್ಕೆ 'ಡೋಲಿ'ಯೆಂದು ಕರೆಯುವುದು ವಾಡಿಕೆ. ಪಂಪದಿಂದ ಶಬರಿಮಲೆಗೆ ಇದರ ಮೂಲಕ ಸಾಗಬೇಕಾದರೆ ಮೂರರಿಂದ ಐದು ಸಾವಿರ ರೂಪಾಯಿಯನ್ನು ವ್ಯಯಿಸಬೇಕು. ಆದರೆ ಹೇಗಾದರೂ ಮಾಡಿ ಒಮ್ಮೆ ಅಯ್ಯಪ್ಪನ ದರ್ಶನ ಮಾಡಬೇಕೆನ್ನುವ ವಯಸ್ಕರಿಗೆ ಇದು ಸಹಕಾರಿಯಾಗಿದೆ.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**

## ಬೀದಿ ನಾಟಕದ ಕಲಾವಿದರು

ಇತ್ತೀಚೆಗೆ ಅಲೆಮಾರಿಯಾಗಿ ಬಂದ ಈ ಇಬ್ಬರು ಸುಡುಗಾಡ ಸಿದ್ಧರು ಹಾವೇರಿಯವರು. ವಿಭೀಷಣ ಹಾಗೂ ಆಂಜನೇಯ ಪಾತ್ರ ಹಾಕಿಕೊಂಡವರು ಕ್ರಮವಾಗಿ ದುರ್ಗಪ್ಪ ಎಂ. ಮಹಾಂತ ಹಾಗೂ ಎಚ್. ವಿಭೂತಿ. ಚಾಮರಾಜನಗರದ ಕೋರ್ಟ್ ರಸ್ತೆಯ ನಾಗೇಂದ್ರ ಟೈಲರ್ ಅಂಗಡಿಯ ಮುಂದೆ ನನ್ನ ಕ್ಯಾಮೆರಾ ಕಣ್ಣಿಗೆ ಸಿಕ್ಕಿದ್ದು ಹೀಗೆ. ಜೀವನ ಸಾಗಿಸಲು ಈ ರೀತಿಯ ವೇಷ ಎಂದು ಅವರು ಹೇಳಿದ್ದು ಮಾರ್ಮಿಕವಾಗಿತ್ತು.

**ಚಿತ್ರ- ಬರಹ: ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ**

